"ಹೌದು... ಒಂದೇ ಜಾಗದಲ್ಲಿ ಇದ್ದುಕೊಂಡು ನೋಡಿದ ಮುಖಗಳನ್ನು ನೋಡುತ್ತಾ ಸೆರೆಯಲ್ಲಿ ಇರುವುದು ಬಹಳ ಕ್ರೂರ. ಜೈಲಿನಲ್ಲಿ ಇದ್ದೇವೆ ಎಂಬ ನೆನಪೇ ಭಯವನ್ನು ಉಂಟು ಮಾಡಿಬಿಡುತ್ತದೆ. ಸಣ್ಣ ಸಣ್ಣ ವಿಷಯಗಳೂ ದೊಡ್ಡದಾಗಿ ಕಾಣಿಸುತ್ತವೆ. ಯಾರನ್ನೂ ಕ್ಷಮಿಸಲು ಮನಸ್ಸು ಬರುವುದಿಲ್ಲ. ಕ್ಷುಲ್ಲಕ ವಿಷಯಗಳಿಗೆಲ್ಲಾ ಜಗಳ ಕಾಯುತ್ತಿದ್ದೆವು."

"ನೀನು ಜಗಳಗಂಟಿ ಕಸ್ತೂರ್. ಅದೂ ಸರಿ, ಏನಿದ್ದರೂ ಸಿರಿವಂತರ ಮನೆಯ ಹೆಣ್ಣಲ್ಲವೇ? ಅಧಿಕಾರ ಮಾಡದೇ ಇರಲು ಆಗುತ್ತದೆಯೇ?"

"ಹಾಗಾದರೆ, ನಿಮ್ಮ ಮಾತು ಕೇಳದೆ, ನನ್ನ ಇಷ್ಟದಂತೆ ನಡೆದುಕೊಂಡೆ ಎಂದು ಹೇಳುತ್ತಿದ್ದೀರಾ?"

"ಹಾಗಂತ ಹೇಳುತ್ತಿಲ್ಲ. ಆದರೂ, ಹರಿಜನರನ್ನು ಒಳಗೆ ಬಿಡದ ಗುಡಿಗಳಿಗೆ ಹೋಗಕೂಡದು ಎಂದು ಹೇಳಿದರೂ ಸಹ ಪುರಿ ಜಗನ್ನಾಥ್ ದೇವಸ್ಥಾನಕ್ಕೆ ಹೋಗಿ ಬಂದೆಯಲ್ಲಾ?"

"ಮೋಹನ್, ನೀವು ಅನಗತ್ಯವಾದ ಮಾತುಗಳನ್ನು ಆಡುತ್ತಿದ್ದೀರಿ. ಅದಕ್ಕೆ ಆಗಲೇ ಕ್ಷಮೆ ಕೇಳಿದೆನಲ್ಲಾ!"

"ಅದಕ್ಕೆ ನಾನೇ ನಿನ್ನ ಬಳಿ ಕ್ಷಮೆ ಯಾಚಿಸಿರಬೇಕು. ನಿನ್ನ ಮೇಲೆ ಗಮನ ಹರಿಸದೆ ಹೋದದ್ದು ನನ್ನ ತಪ್ಪು."

"ಮೋಹನ್, ನೀವು ಬೋಧಿಸುವುದನ್ನೆಲ್ಲ ನನ್ನಿಂದ ಹಾಗೆಯೇ ಸ್ವೀಕರಿಸಲು ಸಾಧ್ಯವಿಲ್ಲ."

"ಹಾಗಾದರೆ, ನೀನು ನನ್ನ ಮಾತು ಕೇಳುವಂತೆ ನಡೆದುಕೊಂಡದ್ದು, ಆ ದಿನ ಕ್ಷಮೆ ಕೇಳಿದ್ದು ಎಲ್ಲವೂ ಬರೀ ನಾಟಕವೇ?"

"ನನ್ನ ಬಗ್ಗೆ ನೀವಾಗಿಯೇ ಒಂದು ತೀರ್ಮಾನಕ್ಕೆ ಬರಬೇಡಿ. ನೀವು ಹೇಳುವ ಮಾತು ನನಗೆ ಸರಿ ಎಂದು ತೋರಿದರೆ, ನಾನು ಅದಕ್ಕೆ ತಕ್ಕಂತೆ ನಡೆದುಕೊಳ್ಳುತ್ತೇನೆ. ದಕ್ಷಿಣ ಆಫ್ರಿಕಾದಲ್ಲಿ ಮಲದ ಮಡಕೆಯನ್ನು ನನ್ನ ಕೈಯಿಂದ ತೆಗೆಯುವಾಗ ನಾನು ಮುಖ ಸಿಂಡರಿಸಿಕೊಂಡದ್ದಕ್ಕೆ ನೀವು ತುಂಬಾ ಕೋಪ ಮಾಡಿಕೊಂಡಿರಿ. ನಿಮ್ಮ ಮಾತಿಗೆ ನಾನು ಕಟ್ಟುಬೀಳಬಹುದು, ನನ್ನ ಮನಸ್ಸು? ಈ ವಿಷಯದಲ್ಲಿ ಸಾವಿರಾರು ತಲೆಮಾರುಗಳಿಂದ ನಮ್ಮ ಪೂರ್ವಜರು ಏನನ್ನು ಬೋಧಿಸಿದ್ದರೋ ಅದನ್ನು ಸಂತೋಷದಿಂದ ನಿರಾಕರಿಸಬೇಕು ಎಂದು ಅಪೇಕ್ಷಿಸಿದಿರಿ. ಇದು ಅತ್ಯಾಚಾರವಲ್ಲವೇ? ಇದೂ ಸಹ ಅಹಿಂಸೆಗೆ ವಿರುದ್ಧವಾದುದಲ್ಲವೇ? ಆದರೆ, ನಿಮ್ಮ ಅದೃಷ್ಟವೋ ಏನೋ, ನೀವು ಹೇಳುವ ಬಹಳ ವಿಷಯಗಳು ನನಗೆ ಸರಿ ಎಂದು ತೋರಿದವು. ಯಾಕೆಂದರೆ, ನೀವು ನನ್ನ ಮೇಲೆ ಅಕ್ಕರೆಯಿಂದಲೂ ಇದ್ದಿರಿ."

"ಒಳ್ಳೆಯದು. ಅದನ್ನಾದರೂ ಅರಿತುಕೊಂಡೆಯಲ್ಲ. ನ್ಯೂಮೋನಿಯ ಜ್ವರ ಬಂದು ನೀನು ದೆಹಲಿಯಲ್ಲಿ ಹಾಸಿಗೆ ಹಿಡಿದಿದ್ದಾಗ ತಂತಿ ಮೇಲೆ ತಂತಿ ಕಳುಹಿಸಿದೆ, ನೆನಪಿದೆಯೇ? ದೇವದಾಸ್ ಮನೆಯಲ್ಲಿ ನಿನ್ನನ್ನು ಉಳಿಸಿ, ಸುಶೀಲ ನಿನ್ನನ್ನು ಆರೈಕೆ ಮಾಡಿದಳು. ನೀನು ನನ್ನ ಪತ್ರಗಳನ್ನೆಲ್ಲಾ ದಿಂಬಿನ ಕೆಳಗೆ ಇಟ್ಟುಕೊಂಡು ಆಗಾಗ ತೆಗೆದು ಓದುತ್ತಿದ್ದೆಯಂತಲ್ಲಾ."

"ನಮ್ಮ ಮಕ್ಕಳೆಲ್ಲಾ ಆರೋಗ್ಯವಾಗಿದ್ದಾರೆಯೇ?..." ಥಟ್ ಎಂದು ಪುಳಕಗೊಂಡು ಎದ್ದ ದನಿ ಕರ್ಕಶವಾಗಿತ್ತು. ತಕ್ಷಣ ಕೋಪ ನೆತ್ತಿಗೇರಿ, "ನಮಗೆ ಹರಿಲಾಲ್ ಹುಟ್ಟಲೇಬಾರದಿತ್ತು" ಎಂದಿತು.

"ಹೌದು, ಅವನಿಂದ ತುಂಬಾ ಕಷ್ಟಗಳನ್ನು ಅನುಭವಿಸಬೇಕಾಯಿತು."

"ಅವನೂ ನಿಮ್ಮಿಂದ ತುಂಬಾ ಅನುಭವಿಸಿದ್ದಾನೆ. ಮೋಹನ್, ಅವನು ನಿಮ್ಮ ಅರ್ಧ ಭಾಗ. ಅವನು 'ಕತ್ತಲ ಗಾಂಧಿ', ನೀವು 'ಬೆಳಕಿನ ಹರಿಲಾಲ್'. ಅವನ ತವಕಗಳನ್ನೂ ಆಸೆಗಳನ್ನೂ ಅದುಮಿಟ್ಟಿರಿ. ನೀವು ನಿಮ್ಮ ಸಿದ್ಧಾಂತಗಳಿಂದ ಅವನ್ನು ಮರೆಮಾಚಿ ಬಿಟ್ಟಿರಿ. ಅದು ಒಂದು ಹಂತದಲ್ಲಿ ಸಿಡಿಯಲೇ ಬೇಕಲ್ಲವೇ. ಅವನು ಇರುವುದೇ ಹಾಗೆ. ಅವನಿಂದ ಹಾಗೆಯೇ ಇರಲು ಸಾಧ್ಯ"